5) IT/ ITEs / Startups / Animation / Gaming/ Computer Graphics / Telecom/BPO/KPO ಹಾಗೂ ಇತರೆ ಜ್ಞಾನಾಧಾರಿತ ಉದ್ದಿಮೆಗಳನ್ನು ಅವಶ್ಯಕ ಸೇವೆಗಳಾಗಿ ಪರಿಗಣನೆ;

6) ಪಿ.ಎಫ್ ಹಾಗೂ ಇ.ಎಸ್.ಐ ವಂತಿಗೆಯ ಹಿಂಪಾವತಿ;

7) ವಿದ್ಯುತ್‌ಚ್ಛಕ್ತಿ ದರದಲ್ಲಿ ರಿಯಾಯಿತಿ;

8) ಸ್ಟ್ಯಾಂಪ್ ಶುಲ್ಕದಲ್ಲಿ ವಿನಾಯಿತಿ;

ಇ) ಕಲಬುರ್ಗಿ ಜಿಲ್ಲೆಯಲ್ಲಿ ಕಿಯೋನಿಕ್ಸ್ ಮುಖಾಂತರ ಐಟಿ ಪಾರ್ಕ್‌ನ್ನು ಸ್ಥಾಪಿಸಲಾಗಿರುತ್ತದೆ. ಈ ಪಾರ್ಕ್‌ನಲ್ಲಿ ಐಟಿ ಘಟಕಗಳಿಗೆ ಅಗತ್ಯ ಪ್ರದೇಶವನ್ನು (built-up space) ಪ್ರತಿ ಚ.ಅಡಿಗೆ ₹ 5/–ರಂತೆ ರಿಯಾಯಿತಿ ದರದಲ್ಲಿ ಬಾಡಿಗೆ ನೀಡಲಾಗಿದೆ.

ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳ ಅನುಷ್ಠಾನ

2691 (3654); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ಕೇಂದ್ರ ಸರ್ಕಾರದ ಗ್ರಾಮೀಣ ಆರೋಗ್ಯ ಕಲ್ಯಾಣ ಸೇವೆ ಯೋಜನೆಯಡಿಯಲ್ಲಿ (Rural Family Welfare services) ಗ್ರಾಮೀಣ ಭಾಗದಲ್ಲಿ ಆರೋಗ್ಯ ಸೇವೆಯನ್ನು ನೀಡಲು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ರಾಜ್ಯ ಸರ್ಕಾರವು ತನ್ನ ಪಾಲಿನ ಎಷ್ಟು ಹಣವನ್ನು ಖರ್ಚು ಮಾಡಿದೆ; ಈ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದಿಂದ ಈ ಅವಧಿಯಲ್ಲಿ ಬಂದಿರುವ ಹಣವೆಷ್ಟು;

ಆ) ಈ ಎರಡೂ ಅನುದಾನದಿಂದ ರಾಜ್ಯದ ಗ್ರಾಮೀಣ ಭಾಗದ ಜನರಿಗೆ ಯಾವ ಯಾವ ಆರೋಗ್ಯ ಸೇವೆಯನ್ನು ಒದಗಿಸಲಾಗಿದೆ; ಇದಕ್ಕಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಪ್ರತಿ ವರ್ಷ ವೆಚ್ಚ ಮಾಡಿದ ಹಣವೆಷ್ಟು (ವಿವರ ಒದಗಿಸುವುದು)?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ)

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ			
ವರ್ಷ	ಬಿಡುಗಡೆಯಾದ ಅನುದಾನ (ಗ್ರಾಮೀಣ)		ವೆಚ್ಚ
	ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ	
2011–12	64739.00	11500.00	80461.01
2012–13	65005.58	18036.00	86547.41
2013–14	60972.19	24741.00	79878.77

ಆ) ಎನ್.ಆರ್.ಹೆಚ್.ಎಂ ಅಡಿಯಲ್ಲಿ ಈ ಕೆಳಕಂಡಂತಹ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜನನಿ ಸುರಕ್ಷಾ ಕಾರ್ಯಕ್ರಮ(ಜೆ.ಎಸ್.ವೈ), ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (ಜೆ.ಎಸ್.ಎಸ್.ಕೆ), ಮಡಿಲು, ಅಂಬುಲೆನ್ಸ್–ನಗು–ಮಗು, ಕಟ್ಟಡ ಕಾಮಗಾರಿ, ಆರ್.ಬಿ.ಎಸ್.ಕೆ, ಆರ್.ಕೆ.ಎಸ್.ಕೆ, ಆಶಾ ಕಾರ್ಯಕ್ರಮ, ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮ, ಪೌಷ್ಟಿಕ ಆಹಾರ ಕಾರ್ಯಕ್ರಮ, ಆರೋಗ್ಯ ಕಾರ್ಯಕ್ರಮಗಳಿಗೆ ಮುಕ್ತ ನಿಧಿ, ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ, ಕುಷ್ಠರೋಗ ಕಾರ್ಯಕ್ರಮ, ಮಲೇರಿಯಾ ಮತ್ತು ಫೈಲೇರಿಯಾ ನಿರ್ಮೂಲನಾ ಕಾರ್ಯಕ್ರಮ, ಐ.ಡಿ.ಎಸ್.ಪಿ, ಆರ್.ಎನ್.ಟಿ.ಸಿ.ಪಿ, ಅಂಧತ್ವ ನಿವಾರಣಾ ಕಾರ್ಯಕ್ರಮ, ರಾಷ್ಟ್ರೀಯ ಜಂತುಹುಳು ನಿರ್ಮೂಲನಾ ಕಾರ್ಯಕ್ರಮ, WIFS ಕಾರ್ಯಕ್ರಮ, ತಂಬಾಕು ನಿಯಂತ್ರಣ ಕಾರ್ಯಕ್ರಮ, ಅಲ್ಲದೆ ಆರೋಗ್ಯ ಸಿಬ್ಬಂದಿಗಳ ತರಬೇತಿ ಹಾಗೂ ತರಬೇತಿ ಕೇಂದ್ರಗಳ ಅಭಿವೃದ್ಧಿಗೆ ಅನುದಾನವನ್ನು ಜಿಲ್ಲಾ ಆರೋಗ್ಯ ಸಂಘಗಳಿಗೆ ಬಿಡುಗಡೆ ಮಾಡಲಾಗುತ್ತದೆ. ವಿಧಾನಸಭಾ ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡುತ್ತಿಲ್ಲ. ಅನುದಾನ ಹಂಚಿಕೆ ಮತ್ತು ಖರ್ಚುಗಳ ವಿವರಗಳನ್ನು ಮೇಲೆ ತಿಳಿಸಲಾಗಿದೆ.